# ಕಲೆಯ ಬೆಲೆ

■ ನರಸಿಂಹಾರೆಡ್ಡಿ
ಯಂಕಮೊಳ, ಸೇಡಂ

ಬ್ರಹ್ಮದತ್ತ ಒಬ್ಬ ಚಿತ್ರಕಲಾವಿದ. ಅವನ ಕೈಯಲ್ಲಿ ಅರಳಿದ ಚಿತ್ರಗಳು ಅನ್ಯರಾಜ್ಯಗಳಲ್ಲಿಯೂ ಪ್ರಸಿದ್ಧವಾಗಿದ್ದವು. ಆದರೆ ತಾನಿದ್ದ ಸ್ವಂತ ರಾಜ್ಯದಲ್ಲೇ ಅವನ ಕಲೆಗೆ ಬೆಲೆ ಬಂದಿರಲಿಲ್ಲ. ಎಷ್ಟು ಸಾರಿ ಮಹಾರಾಜರನ್ನು ಭೇಟಿಯಾಗ ಬಯಸಿದರೂ ಅವಕಾಶವೇ ಸಿಕ್ಕಿರಲಿಲ್ಲ. ಒಂದೆರಡು ಬಾರಿ ತಾನು ಬಿಡಿಸಿದ ಚಿತ್ರಗಳನ್ನು ತನಗೆ ಅರಮನೆಯಲ್ಲಿ ಗೊತ್ತಿದ್ದವರ ಸಹಾಯದಿಂದ ಮಹಾರಾಜರ ಕಣ್ಣಲ್ಲಿ ಬೀಳುವಂತೆ ಮಾಡಿದ. ಆದರೂ ಮಹಾರಾಜರ ಕಡೆಯಿಂದ ಯಾವ ಮೆಚ್ಚುಗೆಯೂ, ಸಂದೇಶವೂ ಬರಲಿಲ್ಲ. ತಾನಿದ್ದ ರಾಜ್ಯದಲ್ಲೇ ತನ್ನ ಕಲೆಗೆ ಪ್ರೋತ್ಸಾಹ, ನೆರವು ಬರಲಿಲ್ಲ. ಹಾಗಾಗಿ ಇನ್ನು ಈ ರಾಜ್ಯ ಬಿಟ್ಟು ಹೋಗೋಣವೆಂದು ನಿರ್ಧರಿಸಿದ.

ಗಂಟು ಮೂಟೆ ಕಟ್ಟಿಕೊಂಡು ಕುಟುಂಬ ಸಮೇತ ಎತ್ತಿನ ಗಾಡಿಯಲ್ಲಿ ಹೊರಟ. ದಾರಿ ಮಧ್ಯೆ ಒಂದು ಕಡೆ ಬಂಡಿ ನಿಂತಿತು. ಎಲ್ಲರಿಗೂ ಹಸಿವಾಗಿತ್ತು. ಅಲ್ಲೇ ಒಂದು ಮರದ ನೆರಳಲ್ಲಿ ಕುಳಿತು ಊಟಮಾಡಿ ಹೋಗೋಣ ಎಂದು ನಿರ್ಧರಿಸಿದರು. ನೀರು ಖಾಲಿಯಾಗಿತ್ತು. ನೀರು ತರೋಣ ಎಂದು ಬ್ರಹ್ಮದತ್ತ ಗಾಡಿಯಿಂದ ಇಳಿದ. ಅವರಿಳಿದ ಜಾಗ ಭೀಕರ ಬರಗಾಲದಿಂದ ಬಳಲಿ ಹೋಗಿತ್ತು. ಅಲ್ಲಿನ ಯಾವೊಂದು ಮರವೂ ಹಸಿರಾಗಿರಲಿಲ್ಲ. ಅಲ್ಲಲ್ಲಿ ಮಾತ್ರ ಹಸಿರು ಕಾಣುತಿತ್ತು. ದೂರದಲ್ಲಿ ಕಾಣುವ ಸಣ್ಣ ಗುಡಿಸಲಿಗೆ ಹೋಗಿ ನೀರು ಕೇಳೋಣ ಅಂತ ಅಂದುಕೊಂಡ. ಹೋಗಿ ನೋಡಿದರೆ ಒಬ್ಬ ಮುದುಕ ಮಾತ್ರ ಇದ್ದ. ನೀರು ಇದೆಯಾ ತಾತ ಅಂತ ಕೇಳಿದ. ಅಲ್ಲೇ ಮೂಲೆಯಲ್ಲಿ ಇದ್ದ ಮಡಕೆಯನ್ನು ತಂದು ನೀರು ಸುರಿದ. ಅದ್ರಲ್ಲಿ ಇದ್ದ ನೀರೂ ಮುಗಿದುಹೋಯಿತು. ತಾತ ನಿನಗೆ ಅಂದ. ನಾನು ಆಮೇಲೆ ತಂದುಕೊಳ್ಳುತ್ತೇನೆ ಎಂದ. ಈ ಪ್ರದೇಶದಲ್ಲಿ ನೀರು ಕಾಣ್ತಿಲ್ವಲ್ಲಾ ತಾತ ಅಂದ. ಇಲ್ಲಿಂದ ಮೂರು ಮೈಲಿ ಹೋಗ್ಬೇಕು ಮಗಾ, ಬಹಳ ತೊಂದರೆ ಇದೆ ಏನು ಮಾಡೋದು ಅಂದ.

ಈ ಪ್ರದೇಶ ಬಿಟ್ಟು ಬೇರೆಡೆ ಹೋಗಬೇಕಿತ್ತು ಮತ್ತೆ ಅಂತ ಬ್ರಹ್ಮದತ್ತ ಪ್ರಶ್ನೆ ಕೇಳಿದ. ಹಾಗೆ ಅಂದುಕೊಂಡೆ ಉಳಿದವರು ಹಾಗೆಯೇ ಹೋಗಿದ್ದಾರೆ. ನಾನೊಬ್ಬನೇ ಇಲ್ಲೇ ಉಳಿದಿದ್ದೇನೆ. ವಲಸೆ ಹೋದ ಜಾಗದಲ್ಲಿ ಎಷ್ಟು ದಿನ ಇದ್ದರೂ ಅದು ನಮ್ಮ ಜಾಗವಲ್ಲ. ನಾವು ಹುಟ್ಟಿ ಬೆಳೆದ ಈ ಭೂಮಿಯನ್ನು ಬಿಟ್ಟು ಬೇರೆಡೆ ಹೋಗಲು ಮನಸ್ಸಾಗುತ್ತಿಲ್ಲ. ಇನ್ನು ಬರಗಾಲದ ವಿಷಯಕ್ಕೆ ಬಂದರೆ, 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವದಿಲ್ಲ' ಹೇಗೋ ಕಾಲಕಳೆಯುತ್ತೇನೆ. ಎಷ್ಟೇ ತೊಂದರೆಗಳು ಬಂದರೂ ನಮ್ಮ ಜೀವನದ ಮೇಲೆ ನಂಬಿಕೆ ಕಳೆದುಕೊಳ್ಳಬಾರದು ಎಂದು ಹೇಳಿದ. ಬ್ರಹ್ಮದತ್ತನಿಗೆ ಆ ತಾತ ತನ್ನ ಸಮಸ್ಯೆಗೂ ಪರಿಹಾರ ನೀಡಬಹುದು, ಎಂದು ತನ್ನ ಸಮಸ್ಯೆ ವಿವರಿಸಿದ.

ಯಾವ ರೀತಿಯ ಚಿತ್ರಕಲೆ ಬಿಡಿಸಿ ಮಹಾರಾಜರ ಗಮನಕ್ಕೆ ತಂದೆ ಅಂತ ಕೇಳಿದ ತಾತ. ಅವರ ರಾಜವೈಭವ, ರಾಜ್ಯದ ಶಿಲ್ಪಕಲೆಗಳ, ಅರಮನೆಗಳ ವರ್ಣಚಿತ್ರಗಳ ಚಿತ್ರಗಳು ಅಂತ ಹೇಳಿದ. ಸದಾ ವೈಭವದಲ್ಲಿ ಇರುವ ಆ ಮಹಾರಾಜನಿಗೆ ಇವೆಲ್ಲಾ ದಿನಾಲೂ ಕಂಡು ಬರುವ ಚಿತ್ರಗಳೇ. ಆ ರಾಜನು ನೋಡದ ನಮ್ಮ ರಾಜ್ಯ ಸಮಸ್ಯೆಗಳ ಬಗ್ಗೆ ಚಿತ್ರಬಿಡಿಸು. ಪ್ರಜೆಗಳ ಕಷ್ಟಗಳ ಬಗ್ಗೆ ತಿಳಿಸು. ನಿನ್ನ ಚಿತ್ರಗಳ ಮೂಲಕ ಆ ಸಮಸ್ಯೆಗಳಿಗೆ ಪರಿಹಾರ ಸೂಚಿಸು ಎಂದು ಹೇಳಿದ. ಬ್ರಹ್ಮದತ್ತನಿಗೆ ತಾತ ಹೇಳಿದ ವಿಷಯ ಸರಿ ಎನಿಸಿತು. ತನ್ನ ಎರಡು ಪ್ರಶ್ನೆಗಳಿಗೆ ಉತ್ತರ ಸಿಕ್ಕವು. ಒಂದು ತಾನು ಹುಟ್ಟಿ ಬೆಳೆದ ಊರನ್ನು ಬಿಟ್ಟು ಹೋಗುವುದು ಹೇಗೆ ಎಂದು. ಇನ್ನೊಂದು ತನ್ನ ಕಲೆಗೆ ಬೆಲೆ ಬಂದಿಲ್ಲವೆಂಬ ಪ್ರಶ್ನೆಗೆ.

ತಾನು ಹುಟ್ಟಿದ ಊರಿಗೆ ಮರಳಿದ. ಪ್ರಜೆಗಳ ಕಷ್ಟ ತಿಳಿಸುವ ಚಿತ್ರಗಳನ್ನು ಬಿಡಿಸಿ. ಮಹಾರಾಜರ ಸಮ್ಮುಖದಲ್ಲಿ ಪ್ರದರ್ಶಿಸಿದ. ತಮ್ಮ ರಾಜ್ಯದಲ್ಲಿನ ಸಮಸ್ಯೆಗಳಿಗೆ ಮಹಾರಾಜರೂ ಸ್ಪಂದಿಸಿದರು. ಬರಗಾಲ ಪೀಡಿತ ಪ್ರದೇಶಗಳಿಗೆ ನೆರವು ನೀಡಿ. ಅಲ್ಲಿನ ಪ್ರಜೆಗಳಿಗೆ ಸಕಲ ಸೌಕರ್ಯಗಳನ್ನು ಒದಗಿಸಿದರು. ರಾಜ್ಯವು ಸುಭಿಕ್ಷವಾಯಿತು. ಪ್ರಜೆಗಳ ಸಮಸ್ಯೆಗಳ ಬಗ್ಗೆ ತಿಳಿಸಿದ ಚಿತ್ರಕಲಾವಿದ ಬ್ರಹ್ಮದತ್ತನನ್ನು ಆಸ್ಥಾನ ಕಲಾವಿದನನ್ನಾಗಿ ಮಹಾರಾಜರು ನೇಮಿಸಿಕೊಂಡರು. ■



ಚಿತ್ರ: ಮಂಜುನಾಥ ಹುಲಕೊಪ್ಪದ